ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

Office No. +91 9141030953 ಪರೀಕ್ಷಾ ವಿಭಾಗ E-mail: registrarevrur@gmail.com

ಕ್ರ.ಸಂ: ರಾವಿರಾ/ಪಿ.ಜಿ–I/2023–24/74 ದಿನಾಂಕ: 01.06.2023

**ಸುತ್ತೋಲೆ**

ವಿಷಯ:2022–23ನೇ ಸಾಲಿನ ಸ್ನಾತಕೋತ್ತರ ವಿಭಾಗಗಳಾದ ಸಮಾಜಕಾರ್ಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯಗಳನ್ನು ಎಮ್.ಎ ಪದವಿಯಿಂದ ಎಮ್.ಎಸ್,ಡೆಬ್ಲ್ಯೂ, ಎಮ್.ಜೆ.ಎಮ್.ಸಿ ಹಾಗೂ ಎಮ್.ಎಲ್.ಐಸಿ ಎಂದು ಬದಲಾಯಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 25.05.2023

*******

ಮೇಲ್ಕಾಣಿಸಿದ ವಿಷಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಎಲ್ಲಾ ರಾಯಚೂರು ವಿಶ್ವವಿದ್ಯಾಲಯದ ಅಧೀನದಲ್ಲಿರುವ ಬರುವಂತಹ ಸಮಾಜಕಾರ್ಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಕೋರ್ಸಗಳನ್ನು ಹೊಂದಿರುವ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ಮುಖ್ಯ ಆವರಣದ ಈ ವಿಭಾಗಗಳ ಮುಖ್ಯಸ್ಥರುಗಳಿಗೆ/ಸಂಯೋಜಕರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2022–23ನೇ ಸಾಲಿನಲ್ಲಿ ಈ ಸ್ನಾತಕೋತ್ತರ ಕೋರ್ಸಗಳನ್ನು ಎಮ್.ಎ ಪದವಿಯಲ್ಲಿ ನೀಡಲಾಗಿತ್ತು. ಸಮಾಜಕಾರ್ಯ ಒಂದು ವೃತ್ತಿಪರ (Professional) ಕೋರ್ಸ ಆಗಿರುವುದರಿಂದ ಅದನ್ನು ಎಮ್.ಎಸ್.ಡೆಬ್ಲ್ಯೂ ಎಂದು ಬದಲಾಯಿಸಬೇಕಾಗಿರುತ್ತದೆ. ಹಾಗೆಯೇ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಕೋರ್ಸಗಳನ್ನು ಎಮ್.ಜೆ.ಎಮ್.ಸಿ ಹಾಗೂ ಎಮ್.ಎಲ್.ಐಸಿ ಎಂದು ಬದಲಾಯಿಸಬೇಕಾಗಿರುತ್ತದೆ. ಈ ಸಂಭಂದವಾಗಿ ವಿಶ್ವವಿದ್ಯಾಲಯವು ಈಗಾಗಲೇ ಬದಲಾವಣೆಯ ಪ್ರಕ್ರಿಯೆಯನ್ನು ಪ್ರಾರಂಬಿಸಿದೆ. ಈ ಪ್ರಕ್ರಿಯೆಯಲ್ಲಿ ಪ್ರಾಚಾರ್ಯರು ಹಾಗೂ ವಿದ್ಯಾರ್ಥಿಗಳು ಸಹಕರಿಸಬೇಕಾಗಿ ಈ ಮೂಲಕ ಸೂಚಿಸಲಾಗಿದೆ. ಈ ಬದಲಾವಣೆಯು ಕೇವಲ 2022–23 ನೇ ಸಾಲಿನಲ್ಲಿ ಪ್ರಥಮ ಸೆಮಿಸ್ಟರೆಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಈ ಮೂಲಕ ಸೂಚಿಸಲಾಗಿದೆ.

(ಪ್ರೊ. ಯರಿಸ್ವಾಮಿ ಎಂ)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಪ್ರತಿಗಳು:

1. ಎಲ್ಲಾ ವಿಭಾಗದ ಮುಖ್ಯಸ್ಥರು/ಸಂಯೋಜಕರು, ಮುಖ್ಯ ಆವರಣ, ರಾಯಚೂರು ವಿಶ್ವವಿದ್ಯಾಲಯದ, ರಾಯಚೂರು ಇವರ ಗಮನಕ್ಕೆ ಮತ್ತು ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ವಿಭಾಗದ ಡೀನರು, ಮುಖ್ಯ ಆವರಣ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಮಾಹಿತಿಗಾಗಿ.
3. ಮಾನ್ಯ ಕುಲಪತಿಗಳ ಕಾರ್ಯದರ್ಶಿಗಳು/ ಮಾನ್ಯ ಕುಲಸಚಿವರ ಆಪ್ತ ಸಹಾಯಕ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಕುಲಸಚಿವರು(ಮೌಲ್ಯಮಾಪನ), ಆಪ್ತ ಕಾರ್ಯದರ್ಶಿ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಕಚೇರಿ ಪ್ರತಿ.